O.S.226/2011
D.W.2

ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**ದಿನಾಂಕಃ 7-07-2017.**

**ಪಾಟೀ ಸವಾಲು ಃ- ಶ್ರೀ ಜಿ.ವಿ.ವಿ. ವಕೀಲರಿಂದ**

ದಾವಾ ಸ್ವತ್ತಿನ ಅಕ್ಕಪಕ್ಕದಲ್ಲಿ ನನಗೆ ಯಾವುದೇ ಸ್ವತ್ತು ಇಲ್ಲ. ನಾನು ತರಕಾರಿ ವ್ಯಾಪಾರ ಮಾಡುತ್ತೇನೆ. ವಿವಾಧಿತ ಸ್ವತ್ತನ್ನು ನಾನು ಅಳತೆ ಮಾಡಿಲ್ಲ. ಸದರಿ ವಿವಾಧಿತ ಚೇಂಬರ್‌ಗೂ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ನಾಗರಾಜ ರವರ ಮನೆಗೂ ಸುಮಾರು 4 ಅಡಿ ಅಂತರ ಇದೆ. ವಾದಿಯ ಮನೆಯ ಗೋಡೆ ಹಾಗೂ ಪ್ರತಿವಾದಿಯ ಅಣ್ಣ ನಾಗರಾಜು ರವರ ಮನೆಯ ಗೋಡೆಗೂ 5 ಅಡಿ ಅಂತರ ಇದೆ.

ಸಾಕ್ಷಿಗೆ ಒಂದು ಫೋಟೋ ತೋರಿಸಲಾಗಿ ಅದನ್ನು ಒಪ್ಪಿದ್ದು, ಅದು ಈಗಾಗಲೆ ನಿಶಾನೆ ಪಿ-8 ಎಂದು ಗುರುತಿಸಲಾಗಿದೆ. ಸದರಿ ನಿಶಾನೆ ಪಿ-8 ರಲ್ಲಿ ಬಲಗಡೆ ಕಾಣುವ ವಾದಿಯ ಮನೆಯಾಗಿದ್ದು, ಎಡಗಡೆ ಕಾಣುವ ಮನೆ ಪ್ರತಿವಾದಿಯ ಅಣ್ಣ ನಾಗರಾಜು ರವರ ಮನೆಯಾಗಿರುತ್ತದೆ.

ನಿಶಾನೆ ಡಿ-11 ಫೋಟೋದಲ್ಲಿ ಬಲಗಡೆ ಕಾಣುವ ಮನೆಯು ವಾದಿಯ ಮನೆಯಾಗಿದ್ದು, ಎಡಗಡೆಯ ಕಾಣುವ ಮನೆಯು ಪ್ರತಿವಾದಿಯ ಅಣ್ಣ ನಾಗರಾಜು ರವರ ಮನೆಯಾಗಿರುತ್ತದೆ. ನಾಗರಾಜು ಮತ್ತು ಪ್ರತಿವಾದಿಯ ಮನೆ ಒಂದೇ ಸಾಲಿನಲ್ಲಿದೆ ಎಂದರೆ ಸರಿ. 1ನೇ ಪ್ರತಿವಾದಿಯ ಅಣ್ಣ ನಾಗರಾಜು ಬೋರ್‌ವೆಲ್ ಕೊರೆಸುವ ಕೆಲಸ ಮಾಡುತ್ತಾರೆ ಎಂದರೆ ಸರಿ ಹಾಗೂ ಬೋರ್‌ವೆಲ್ ಲಾರಿಗಳು ಇದೆ ಎಂದರೆ ಸರಿ. ನಾನು ಸದರಿ ನಾಗರಾಜು ರವರ ಬಳಿ ಸದರಿ ಲಾರಿಗಳ ಆಗುಹೋಗುವನ್ನು ನೋಡಿಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ಸದರಿ ನಾಗರಾಜು ರವರು ಮಾಜಿ ಪುರಬೆಯ ಸದಸ್ಯರು ಹಾಗೂ ಹಾಲಿ ಸದಸ್ಯರು ಎಂದರೆ ಸರಿ. ವಾದಿ ಮತ್ತು ಪ್ರತಿವಾದಿ ಹಾಗೂ ನಾಗರಾಜು ರವರ ನಡುವೆ ಆಗ್ಗಾಗ್ಗೆ ಆಸ್ತಿ ಸಂಬಂದಿಸಿದಂತೆ ಜಗಳ ನಡೆಯುತ್ತಿದೆ ಎಂದರೆ ಸರಿಯಲ್ಲ,

ವಾದಿ ಮತ್ತು ಪ್ರತಿವಾದಿಗಳಿಗೂ ಒಳಚರಂಡಿಯ ಬಗ್ಗೆ ವಿವಾದ ಇದೆ. ವಾದಿಗೆ ಎಷ್ಟ ಅಳತೆಯ ಸ್ವತ್ತ ಇತ್ತು ಎಂದು ನಿಖರವಾಗಿ ಗೊತ್ತಿಲ್ಲ. ವಾದಿ ಸದರಿ ಸ್ಥಳದಲ್ಲಿ ಒಳಚರಂಡಿಯ ಕಟ್ಟಿಕೊಂಡಿರುತ್ತಾರೆ. ವಾದಿ ಮನೆಯನ್ನು ಕಟ್ಟಿ ಸುಮಾರು 7 ವರ್ಷಗಳಾಗಿವೆ. ವಾದಿ ತಮ್ಮ ಮನೆಯನ್ನು ಬಾಡಿಗೆಗೆ ನೀಡಿದ್ದಾರೆ. ವಾದಿ ಮನೆ ಕಟ್ಟಿರುವ ಸ್ವತ್ತಿನ ನಕ್ಷೆಯನ್ನು ನಾನು ನೋಡಿಲ್ಲ. ಪ್ರತಿವಾದಿ ಎಷ್ಟು ಅಡಿಗಳಿಗೆ ಪುರಸಬೆಯಿಂದ ಅನುಮತಿ ಪಡೆದಿದ್ದಾರೆ ಹಾಗೂ ಎಷ್ಟು ಅಡಿಗಳಿಗೆ ನಕ್ಷೆಗೆ ಅನುಮೋದನೆ ನೀಡಿದ್ದಾರೆ ಎಂದು ಗೊತ್ತಿಲ್ಲ. ದಾವಾ ವಸ್ತು ವಿಷಯ ಗೊತ್ತಿಲ್ಲದಿದ್ದರೂ ಕೂಡ ನಾಗರಾಜು ರವರ ಬಳಿ ನಾನು ಕೆಲಸ ಮಾಡುತ್ತಿದ್ದರಿಂದ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ,

**<u>ಮರು ವಿಚಾರಣೆ ಇಲ್ಲ ಃ</u>**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ.ಸ.ಇ.ಎ.ಒ.,**

***(ಎಸ್.ಚಿನ್ನಸ್ವಾಮಿ)***
ಅಧಿಕ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ.,